ಕರ್ನಾಟಕ ಸರ್ಕಾರ

**ಅಕ್ಟೋಬರ್ 5, 2016**

**ಸುಪ್ರಸಿದ್ಧ ಮನೋವೈದ್ಯ ಡಾ ಕೆ. ಎ. ಅಶೋಕ್ ಪೈ ಅವರ ನಿಧನಕ್ಕೆ**
**ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ**

**ಬೆಂಗಳೂರು, ಅಕ್ಟೋಬರ್ 5:**

ಸುಪ್ರಸಿದ್ಧ ಮನೋವೈದ್ಯ ಡಾ ಕೆ. ಎ. ಅಶೋಕ್ ಪೈ ಅವರ ನಿಧನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಮಾನಸಿಕ ಸ್ವಾಸ್ಥ್ಯಕ್ಕೆ ಅತ್ಯುತ್ತಮ ಶುಶ್ರೂಷೆ ಒದಗಿಸಬೇಕೆಂಬ ಹೆಬ್ಬಯಕೆಯಿಂದ ಡಾ ಅಶೋಕ್ ಪೈ ಅವರು ಪ್ರಾರಂಭಿಸಿದ ಆಸ್ಪತ್ರೆಯು ಮನೋ ಆರೋಗ್ಯ ಲೋಕದಲ್ಲಿ ಶಿವಮೊಗ್ಗ ಜಿಲ್ಲೆಗೆ ವಿಶ್ವ ಮಾನ್ಯತೆ ತಂದುಕೊಟ್ಟಿತು ಎಂಬುದು ಇದೀಗ ಇತಿಹಾಸ.

ಮನೋ ಚಿಕಿತ್ಸೆ ಕುರಿತಂತೆ ಡಾ ಅಶೋಕ್ ಪೈ ಅವರು ಬರೆದಿರುವ ಪುಸ್ತಕಗಳು ಹಾಗೂ ನಿರ್ಮಿಸಿರುವ ಚಲನಚಿತ್ರಗಳು ಎಲ್ಲವೂ ಅವರ ಅಪಾರ ಪ್ರತಿಭೆಗೆ ಸಾಕ್ಷಿ.

ತಮ್ಮ ನಾಲ್ಕು ದಶಕಗಳ ಸುದೀರ್ಘ ವೃತ್ತಿ ಜೀವನದಲ್ಲಿ ಡಾ ಅಶೋಕ್ ಪೈ ಅವರು ಎರಡು ಲಕ್ಷ ರೋಗಿಗಳಿಗೆ ಗುಣಮುಖರಾಗಲು ಅನುವು ಮಾಡಿಕೊಟ್ಟಿದ್ದಾರೆ ಎಂಬುದು ಅಭಿಮಾನ ಮೂಡಿಸುವ ಸಂಗತಿಯಾಗಿದೆ.

ಡಾ ಕೆ. ಎ. ಅಶೋಕ್ ಪೈ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗೂ ಶ್ರೀಯುತರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ, ಬಂಧು–ಮಿತ್ರರಿಗೆ ಕರುಣಿಸಲಿ ಎಂದು ಸಿದ್ದರಾಮಯ್ಯ ಅವರು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.

************

ಡಿ ಪಿ ಎಂ